ಒ. ಎಸ್. ನಂ. 358/2022

ಪಿಡಬ್ಲೂ-2

**<u>ದಿನಾಂಕಃ 14.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.</u>**

**<u>ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-</u>**

ನನ್ನ ಮತ್ತು ವಾದಿಗಳ ಊರು ಬೇರೆ ಬೇರೆ ಎಂದರೆ ಸರಿ. ಯಾರ ವಿರುದ್ದ ದಾವೆ ಸಲ್ಲಿಸಿರುತ್ತಾರೆ ಎಂದು ಅವರ ಹೆಸರು ಗೊತ್ತಿಲ್ಲ. ವಾದಿಯ ಗಂಡನಿಗೆ ಎಷ್ಟು ಸಹೋದರರು ಎಂದು ಗೊತ್ತಿಲ್ಲ. ವಾದಿ ಸರ್ವೆ ನಂಬರ್ 1/2 ರ ಸ್ವತ್ತಿಗೆ ದಾವೆ ಹೂಡಿರುತ್ತಾರೆ. 4 ಎಕರೆ ಸರ್ಕಾರದಿಂದ ಮಂಜೂರಾಗಿರುತ್ತದೆ. ಯಾವ ವರ್ಷದಲ್ಲಿ ಮಂಜೂರಾಗಿತ್ತು ಎಂದು ನೆನಪಿಲ್ಲ. ವಾದಿ ಹೇಗೆ ಪರಿಚಯ ಎಂದರೆ ದಾವಾ ಸ್ವತ್ತಿನ ಪಕ್ಕ ನನ್ನ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಸು.10 ವರ್ಷದಿಂದ ಸೋಮಶೇಖರ್ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ವಿಚಾರ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸದರಿ ಆಸ್ತಿಯನ್ನು ಸೋಮಶೇಖರ್ ಎಂಬುವರಿಗೆ ಬೋಗ್ಯ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಗೆ ಸಂಬಂದಿಸಿದಂತೆ ಹುಚ್ಚನಾಯಕ ಉ. ಕುಳ್ಳ ಅಂಕನಾಯಕ ಎಂಬುವರು ಅದಾ ನಂ 193/1997 ರಂತೆ ವಾದಿ ವಿರುದ್ದ ದಾವೆ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ದಾವಾ ಸ್ವತ್ತಿನ ನನಗೇನು ಗೊತ್ತಿಲ್ಲದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ**